# ಎರಡು ಕವಿತೆಗಳು

■ ಚಿಂತಾಮಣಿ ಕೊಡ್ಲೆಕೆರೆ




## ಕನ್ನಡ ತಾಯಿಯ ಮಕ್ಕಳು ನಾವು

ಕನ್ನಡ ತಾಯಿಯ ಮಕ್ಕಳು ನಾವು
ಇಂಗ್ಲಿಷ್ ಕಲಿತೀವಿ
ಕನ್ನಡ ಮರೆಯೊ ಮಾತೇ ಇಲ್ಲ
ಅಮ್ಮಾ ಅನುತೀವಿ!

ಅಮ್ಮನ ಹಾಲಿನ ಜೊತೆಗೇ ಹರಿದಿದೆ
ಕನ್ನಡ ನುಡಿ ಧಾರೆ
ಕನ್ನಡ ಮರೆಯೊ ಮಾತೇ ಇಲ್ಲ
ಚಿಂತೆ ಬೇಡ ಬೇರೆ!

ಅಪ್ಪ ಅಮ್ಮ ಅಕ್ಕ ತಮ್ಮ
ಎಲ್ಲ ಬೇಕು ನಮಗೆ
ಕನ್ನಡದಲ್ಲೇ ಒಲವು ಮುನಿಸು
ಸರಸ ಕಡೆಯವರೆಗೆ!

ಪಂಪ, ಕುವೆಂಪು, ಬೇಂದ್ರೆ, ಜನ್ನ
ಎಲ್ಲ ಬೇಕು ನಮಗೆ
ಮೇಲೆ ಹಾರಿದರೂ ನಮ್ಮ ಗೂಡಿದು ■

## ಐಸ್ ಕ್ರೀಮ್ ಕೂಟ

ಅಂದು ಹಬ್ಬದ ಮೋಜು ಎಲ್ಲೆಲ್ಲು ಸಡಗರ
ದೇವತೆಗಳೆಲ್ಲ ಜೊತೆಗೂಡಿ
ಮನದುಂಬಿ ಹಾಡಿದರು ಕುಣಿದು ಕುಪ್ಪಳಿಸಿದರು
ಒಲವಿಂದ ನಕ್ಕುನಲಿದಾಡಿ

ಗಣಪ ಸೊಂಡಿಲನೆತ್ತಿ ಫಕ್ಕನೆ ಹೊಡೆದದ್ದು
ವರುಣನಿಗೆ – ಮಳೆಯಾಯ್ತು ಇಳೆಗೆ
ಗೌರಿ ಬಣ್ಣದ ನೀರು ಎರಚಿದಳು ಶಿವನಿಗೆ
ಶಿವನು ಓಡಿದ ಬಚ್ಚಲೊಳಗೆ

ಆ ರುದ್ರಮುನಿಯ ಗಡ್ಡವ ಎಳೆದುದು ಯಾರೋ
ಅರಚಿರುವ 'ಏನು ಹುಡುಗಾಟ'
(ಸ್ಕಂದನೇ ಇರಬೇಕು), 'ಮುನಿಗಳೇ ಮನ್ನಿಸಿರಿ
ಯಾರೋ ತಿಳಿಯದೆಗೈದ ಪಾಪ!'

ಗಿರಿಜೆ ತಂದಳು ಈಗ ಹಿಮಕೆ ಸಕ್ಕರೆ ಬೆರೆಸಿ
ಐಸ್ ಕ್ರೀಮ್ ತುಂಬ ರುಚಿ, ತಿನ್ನಿ
ತಿಂದು ನಕ್ಕರು ಈಗ ರುದ್ರಮುನಿದೇವರು
'ಇನ್ನಷ್ಟು ಮತ್ತಷ್ಟು ತನ್ನಿ'

ಐಸ್ ಕ್ರೀಮು ತಿನ್ನುತ್ತ ಶಾಂತರಾದರು ಎಲ್ಲ
ಕೈ ಮುಗಿಯುತಿದ್ದಾನೆ ವರುಣ
'ಐಸ್ ಕ್ರೀಮಿನಿಂದ ಶಾಂತಿ ಆನಂದ
ಬೆಳೆಸಿಕೊಳ್ಳಿರಿ ಲೋಕಕರುಣ'

ಲೋಕ ಕಾಯುವ ತತ್ವ ಹೊಳೆದುಬಿಟ್ಟಿದೆ ಶಿವೆಗೆ
ಮನದುಂಬಿ ನಕ್ಕನಾ ಗಂಡ
'ವಿಶ್ವದೆಲ್ಲೆಡೆ ಐಸ್ ಕ್ರೀಮ್ ಕೂಟಗಳ ಮಾಡೋಣ
ಮಿಕ್ಕೆಲ್ಲ ಯೋಜನೆ ದಂಡ!' ■



ಚಿತ್ರಗಳು: ವಿಜಯಕುಮಾರಿ ಆರ್.